## ಬದುಕಿಗೆ ರೆಕ್ಕೆ, ಸರಿದಾರಿಯ ತೋರುಬೆರಳು




**-ಚಾಂದ್ ಪಾಷ ಎನ್.ಎಸ್.,** ಸಂಶೋಧನಾ ವಿದ್ಯಾರ್ಥಿ, ಬೆಂಗಳೂರು ವಿಶ್ವವಿದ್ಯಾಲಯ

ಸಂವಿಧಾನ ಪ್ರತಿಯೊಬ್ಬರ ಬದುಕಿನ ಜೀವನಾಡಿ. ಹತಾಶೆಗೊಂಡ ಬದುಕಿಗೆ ಸರಿ ದಾರಿ ತೋರುವ ತೋರುಬೆರಳು ಮಾದರಿ ಇದು. ಅಸಂಖ್ಯಾತ ಅನಾಥ ಸಮುದಾಯಗಳ ಒಳಧ್ವನಿಯೂ ಜೀವಧ್ವನಿಯೂ ಆಗಿರುವ ಸಂವಿಧಾನವು ನೀಡಿದ ಮೀಸಲಾತಿಯಿಂದಾಗಿಯೇ ನಾನಿಂದು ಪಿಎಚ್.ಡಿ. ಮಾಡುತ್ತಿದ್ದೇನೆ.

ಇತ್ತೀಚಿನ ಸಂದರ್ಭದಲ್ಲಿ ಸಂವಿಧಾನದ ಬೇರನ್ನು ಕತ್ತರಿಸಲು ಹವಣಿಸುತ್ತಿರುವ ಮೂಲಭೂತವಾದಿಗಳ ಹಾಗೂ ಯಥಾಸ್ಥಿತಿವಾದಿಗಳ ಅಬ್ಬರ ಹೆಚ್ಚಾಗಿದೆ. ಜಾತಿಯ ವಿಷವರ್ತುಲದ ನಿರ್ನಾಮಕ್ಕೆ ಸಂವಿಧಾನ ಒಂದೇ ಮದ್ದು. ಇಂಥ ಸಂವಿಧಾನಗಳು ಎಲ್ಲ ಧರ್ಮಗ್ರಂಥಗಳಿಗಿಂತಲೂ ಮುಖ್ಯವಾಗಲಿ. ನನ್ನಂಥವರ ಬದುಕಿಗೆ ರೆಕ್ಕೆ ಬಿಗಿದ ಬಾಬಾ ಸಾಹೇಬರ ಸಂವಿಧಾನಕ್ಕೆ ಶರಣು ಹೇಳುವೆ.



## ಸಮಾನ ಬದುಕಿನ ಭರವಸೆ

**-ತಾರಾಮಣಿ ಎಂ.,** ಉಪನ್ಯಾಸಕಿ




ಜಗತ್ತಿನ ಯಾವ ಬಂಧು ಮಿತ್ರರು ನೀಡಲು ಅಸಾಧ್ಯವಾದಂತಹ ರಕ್ಷಣೆ ಮತ್ತು ಭದ್ರತೆಯನ್ನು ಸಂವಿಧಾನ ನನಗೆ ನೀಡಿದೆ. ನಮ್ಮ ಬದುಕು ಮತ್ತು ಆಯ್ಕೆಯ ಹಕ್ಕು ಬಾಧ್ಯತೆಗಳನ್ನು ಭಾರತದ ಸಂವಿಧಾನ ನಮಗೆ ನೀಡಿದೆ. 150 ಕೋಟಿ ಜನಸಂಖ್ಯೆ ಇರುವ ಈ ಸಮಾಜ ಹಲವು ಸಂಸ್ಕೃತಿ, ಧರ್ಮ, ಸಾವಿರಾರು ಭಿನ್ನತೆಗಳನ್ನು ಒಳಗೂಂಡಿರುವ ಸಂಕೀರ್ಣ ರೂಪವನ್ನು ಹೊಂದಿದೆ. ಆದರೂ ಭಾರತೀಯರಾದ ನಾವೆಲ್ಲರೂ ಸಮಾನರು ಎಂಬ ಭ್ರಾತೃತ್ವ ಭಾವದ ಭರವಸೆಯನ್ನು ನನಗೆ ಅದು ನೀಡಿದೆ. ಪ್ರಮುಖವಾಗಿ ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆಯರ ಬದುಕಿಗೆ ಸಮಾಜದ ಎಲ್ಲಾ ಆಯಾಮಗಳಲ್ಲಿ ಸಮಾನ ಅವಕಾಶಗಳನ್ನು ಬಾಬಾ ಸಾಹೇಬ ಅಂಬೇಡ್ಕರ್ ಅವರ ಸಂವಿಧಾನ ಕಲ್ಪಿಸಿದೆ. ಇದು ಸರ್ವರಿಗೂ ಸಮಾನ ಅವಕಾಶ ಮತ್ತು ಬದುಕನ್ನು ನೀಡುತ್ತಿದೆ ಎಂಬ ಭರವಸೆಯೂ ನನಗಿದೆ.

ನೊಂದವರು, ಸಮಾಜದ ತರತಮಗಳನ್ನು ಅನುಭವಿಸಿದವರು ಹಾಗೂ ಗಾಯಗೊಂಡವರ ಪ್ರತಿನಿಧಿಯ ಮುಂದಾಳತ್ವದಲ್ಲಿ ರೂಪುಗೊಂಡ ಕಾರಣದಿಂದಲೇ 'ಭಾರತೀಯ ಸಂವಿಧಾನ'ವು ಜನರ ನೋವಿಗೆ ಮಿಡಿವ ಪ್ರಾಣಮಿತ್ರನಾಗಲು ಸಾಧ್ಯವಾಗಿದೆ. ತಾರತಮ್ಯಕ್ಕೆ ಒಳಗಾದವರು ಹಾಗೂ ಸಮಾನತೆಗಾಗಿ ಹಂಬಲಿಸುವವರು 'ಸಮ ಸಮಾಜ'ದ ಸಾಕಾರಕ್ಕಾಗಿ ರೂಪಿಸಿದ ಪಠ್ಯ 'ನಮ್ಮ ಸಂವಿಧಾನ'ವಾಗಿದೆ; 'ಬಡವರ ನಗುವಿನ ಶಕ್ತಿ'ಯಾಗಿದೆ.

'ಖಡ್ಗವಾಗಲಿ ಕಾವ್ಯ, ಜನರ ನೋವಿಗೆ ಮಿಡಿವ ಪ್ರಾಣಮಿತ್ರ' ಎನ್ನುವುದು ಕರ್ನಾಟಕದ ಬಂಡಾಯ ಸಂಘಟನೆಯ ಜೀವವಾಕ್ಯ. ಈ ಮಾತು ಸಂವಿಧಾನದ ಬೀಜವಾಕ್ಯವೂ ಆಗಿದೆ. ಸಮಾನತೆ ಹಾಗೂ ಘನತೆಗಳನ್ನು ಶಕ್ತಿಯನ್ನಾಗಿಸಿಕೊಂಡ ಸಂವಿಧಾನ ಜನರ ನೋವಿಗೆ ಲಭ್ಯವಿರುವ ಔಷಧಿಯಾಗಿದೆ. 'ಸತ್ಯಮೇವ ಜಯತೆ' ಎನ್ನುವುದು ಸಂವಿಧಾನ ಒಳಗೊಂಡಿರುವ ರಾಷ್ಟ್ರೀಯ ಘೋಷಣೆಯಷ್ಟೇ ಅಲ್ಲ, ಅದು ಭಾರತೀಯ ಸಂಸ್ಕೃತಿಯ ಕೇಂದ್ರಪ್ರಜ್ಞೆಯೂ ಆಗಿದೆ. 'ನಾವು ಭಾರತೀಯರು, ಮೊದಲನೆಯದಾಗಿ ಮತ್ತು ಕೊನೆಯದಾಗಿ' (ಅಂಬೇಡ್ಕರ್) ಎನ್ನುವ ಸತ್ಯವೇ ಸಂವಿಧಾನದ ಸತ್ವವಾಗಿದೆ.

ಆರ್ಥಿಕ, ಸಾಮಾಜಿಕ ಇಲ್ಲವೇ ರಾಜಕೀಯ ಹಿನ್ನೆಲೆಯಿಲ್ಲದ ರೈತನೊಬ್ಬ ತನ್ನ ಜಮೀನು ಉಳಿಸಿಕೊಳ್ಳಲು ಬಲಾಢ್ಯ ಶಕ್ತಿಗಳನ್ನು ಎದುರು ಹಾಕಿಕೊಂಡ ಹಲವು ಉದಾಹರಣೆಗಳನ್ನು ಈ ದೇಶ ಕಂಡಿದೆ. ಸಾಮಾಜಿಕ ಹಿತದ ಹಂಬಲದಲ್ಲಿ ರಾಜಕೀಯ ವ್ಯವಸ್ಥೆಯನ್ನು, ಅಧಿಕಾರಿಗಳನ್ನು ಎದುರು ಹಾಕಿಕೊಂಡು ಜೀವ–ಜೀವನವನ್ನು ಅಪಾಯಕ್ಕೆ ಒಡ್ಡಿಕೊಂಡವರಿದ್ದಾರೆ. ಲಂಚಗುಳಿ ವ್ಯವಸ್ಥೆಯ ವಿರುದ್ಧ ಸಿಟ್ಟಿಗೆದ್ದು ಸಮಾಜದಲ್ಲಿ ನೈತಿಕತೆಯನ್ನು ಎತ್ತಿಹಿಡಿಯಲಿಕ್ಕಾಗಿ ಜೀವನವನ್ನು ಪಣಕ್ಕೊಡ್ಡಿದವರಿದ್ದಾರೆ. ಇಂಥ ಅಸಾಮಾನ್ಯ ಸಾಹಸಗಳ ಸಾಮಾನ್ಯರನ್ನು ಮುನ್ನಡೆಸುವುದು ಯಾವ ಶಕ್ತಿ? ಇದಕ್ಕೆ ಉತ್ತರ, ಸಂವಿಧಾನ, ಈ ನೆಲದ ಕಾನೂನಿನ ಕುರಿತ ನಂಬಿಕೆ. ಧಾರ್ಮಿಕ ಗುರು, ಪ್ರಜಾ ಪ್ರತಿನಿಧಿಗಳ ಲೈಂಗಿಕ ಹಗರಣಗಳ ವಿರುದ್ಧ ನಾಗರಿಕರು ಧ್ವನಿ ಎತ್ತಲು ಸಂವಿಧಾನವೇ ಶಕ್ತಿಯನ್ನು ನೀಡಿದೆ. ಸಾಮಾನ್ಯ ವ್ಯಕ್ತಿಯೊಬ್ಬನನ್ನು ಕೊಂದನೆನ್ನುವ ಆರೋಪದಲ್ಲಿ ಪ್ರಭಾವಿ ನಟನೊಬ್ಬನನ್ನು ಕಟಕಟೆಯ ಹಿಂದೆ ನಿಲ್ಲಿಸಲು ನಮ್ಮ ಸಂವಿಧಾನ ವ್ಯವಸ್ಥೆ ಅವಕಾಶ ನೀಡುತ್ತದೆ.

ವೈಯಕ್ತಿಕ ಹಿತಕ್ಕಾಗಿ ದೇವರ ಮೇಲೆ ಭಾರ ಹಾಕುವವರುಂಟು. ಆದರೆ, ಸಾಮಾಜಿಕ ಹಿತದ ಕನಸು ಕಾಣುವವರಿಗೆ ಸಂವಿಧಾನವೇ ಶಕ್ತಿ, ದೇವರು. ಗಾಂಧಿಯಂಥ ಆಸ್ತಿಕರೂ ಸಮಾಜದ ಬದಲಾವಣೆಗಾಗಿ ನೆಚ್ಚಿದ್ದು ಕಾನೂನಿನ ಶಕ್ತಿಯನ್ನೇ. 'ಯಂಗ್ ಇಂಡಿಯಾ'ದಲ್ಲಿನ ಗಾಂಧೀಜಿಯವರ ಬರಹವೊಂದರಲ್ಲಿ (1931) ಸಂವಿಧಾನದ ಕುರಿತ ಅವರ ನಿರೀಕ್ಷೆ–ಅಪೇಕ್ಷೆಗಳನ್ನು ಗುರ್ತಿಸಬಹುದು:

"ದಾಸ್ಯ ಮತ್ತು ಅನುಗ್ರಹದಿಂದ ಭಾರತವನ್ನು ಬಿಡುಗಡೆಗೊಳಿಸುವ ಸಂವಿಧಾನಕ್ಕಾಗಿ